dd 388
T.P-2

(1)

Reg B G No. 155 10 - 10 - 1968

Bank Road Bahusar,
The Standard Shop
with a Standard Price
and a Standard Policy.
A Fair Price Shop
in Actual Practice.
You are quite safe in your
dealings with them
No Worry.
No biggle-haggling.

SATYAVADI, Daily MYSORE 4

ಸತ್ಯವಾದಿ

52 nd Year of Publication

ಸ್ಥಾಪಕರು : ಅರಮನೆ ಸಿರಸ್ತೇದಾರ್ ಎಂ. ಪಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಆಹಾರ ಕಾರ್ಪೊರೇಷನ್ ದಾಸ್ತಾನು ಮಳಿಗೆಯಲ್ಲಿ ಗೋಧಿ ಮಾಯ

ಓರಿಯಂಟಲ್ ಡಾನ್ಸ್

ಮೈಸೂರು ದಸರಾ ವಸ್ತುಪ್ರದರ್ಶನ ನಡೆಯುತ್ತಿರುವ
ಜೀವಣರಾಯನ ಕಟ್ಟೆಯಲ್ಲಿ
ಚಿತ್ತಾಕರ್ಷಕ ವೈವಿಧ್ಯಮಯ ನರ್ತನಗಳು

ತಪ್ಪದೇ ನೋಡಿ ಆನಂದಿಸಿರಿ

ಪ್ರವೇಶಧನ : ರೂ. 1 ಮತ್ತು 50 ಪೈಸೆ

ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ತೆನ್ನಾರವರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ|| ಎಂ.ಸಿ ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಕೋ) ಶಾಸ್ತ್ರಧರ್ಮನಿರತ ಶ್ರೀ ಅನಂತನಂಜಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವಂದು ಆಶಿಸಿ, ಕೃತಜ್ಞತಾಪೂರ್ವಂದಿಸುತ್ತೇವೆ

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ದಾಖಲಾತಿ ಪ್ರವೇಶ

ಮೆಕ್ಸಿಕೋ— ಒಲಂಪಿಕ್ ಗ್ರಾಮದಲ್ಲಿ ದಾಖಲಾತಿಯು 100 ದೇಶಗಳ 7297 ಕ್ರೀಡಾಪಟುಗಳು ನೆಲೆಸಿದ್ದಾರೆ.

ಪೇಂಟಿಂಗ್ ಸ್ಪರ್ಧೆ

ಮೈಸೂರು— ಜೂನಿಯರ್ ಚೇಂಬರಿನವರು, ಸ್ಕೂಲು ಮಕ್ಕಳಿಗೆ ಕರ್ಜನ್ ಪಾರ್ಕಿನಲ್ಲಿ ತಾ|| 27 ರಂದು ಬೆಳಿಗ್ಗೆ 9 ಗಂಟೆಗೆ ಪೇಂಟಿಂಗ್ ಸ್ಪರ್ಧೆ ಏರ್ಪಡಿಸಿದ್ದಾರೆ.

— ಹಿಂದಿಯೇ ನನುಃ

ಹರಿಯಾಣಾ ರಾಜ್ಯವು ಆಡಳಿತದ ಎಲ್ಲ ಮಟ್ಟದಲ್ಲೂ ಮುಂದಿನ ಪ್ರಜಾರಾಜ್ಯ ದಿನದಿಂದ ಹಿಂದಿಯನ್ನು ಅಧಿಕೃತ ಭಾಷೆಯಾಗಿ ಜಾರಿಗೆ ತರುವದಾಗಿ ಪ್ರಕಟವಾಗಿದೆ.

○ ಮುಷ್ಕರ ಹೂಡಿದ ಸರ್ಕಾರಿ ನೌಕರರ ಭವಿಷ್ಯದ ಬಗ್ಗೆ ನಿರ್ಧಾರವನ್ನು ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ವಿದೇಶ ಪ್ರವಾಸದಿಂದ ಹಿಂದಿರುಗುವ ವರಿಗೆ ಮುಂದಕ್ಕೆ ಹಾಕಲಾಗುವುದೆಂದು ನವ ದೆಹಲಿ ವಾರ್ತೆ ತಿಳಿಸುತ್ತದೆ.

○ ದೀರ್ಘಾವಧಿಯಿಂದ ಖಟ ಮಂಡು ಬಂದೀಖಾನೆಯಲ್ಲಿದ್ದ ನಲವತ್ತೇಳು ರಾಜಬಂದಿಗಳನ್ನು ಬಿಡುಗಡೆ ಮಾಡಲು ದೊರೆ ಮಹೇಂದ್ರರು ಆಜ್ಞೆ ಮಾಡಿದರು.

ಅಹಮದಾಬಾದಿನ ಸಮೀಪದ ಬಾಡಿಗೆ ಗೋಡೌನ್ ಒಂದರಲ್ಲಿ ದಾಸ್ತಾನು ಮಾಡಿದ್ದ 2326 ಮೂಟೆ ವಿದೇಶಿ ಗೋಧಿ ಮಾಯವಾಗಿದೆ ಎಂದು ಆಹಾರ ಕಾರ್ಪೊರೇಷನ್ ಪೊಲೀಸರಿಗೆ ದೂರಿತ್ತಿದೆ. ಹೊರಗಡೆ ನುತ್ತು ಒಳಗಡೆ ಬಾಗಿಲು ಹಚ್ಚಿದ್ದಿತೆಂದು ವರದಿಯಾಗಿದೆ

★

ವಿದ್ಯಾರ್ಥಿಗಳಿಗೆ ಹಿತವಚನ

ರಾಯಚೂರಿನ ಬಿ ಆರ್ ಬಿ ಕಾಮರ್ಸ್ ಕಾಲೇಜಿನಲ್ಲಿ ಸಮಾಜ ಕಲ್ಯಾಣ ಉಪಮಂತ್ರಿ, ಶ್ರೀಮತಿ ಬಸವರಾಜೇಶ್ವರಿಯವರು ಮಾತನಾಡುತ್ತಾ, ಉಪಾಧ್ಯಾಯರು ಹಾಗೂ ಹಿರಿಯರನ್ನು ವಿದ್ಯಾರ್ಥಿಗಳು ಗೌರವಿಸಬೇಕೆಂದು, ವಿದ್ಯಾರ್ಥಿಗಳು ಚೆನ್ನಾಗಿ ಓದಬೇಕೆಂದು, ಶಿಸ್ತಿನಿಂದ ನಡೆಯಬೇಕೆಂದು, ಹಿಂಸಾಕೃತ್ಯ ಮತ್ತು ಚಳುವಳಿ ಮನೋಭಾವ ತ್ಯಜಿಸಬೇಕೆಂದು ತಿಳಿಸಿದರು.

★

ಆಹಾರ ಪೊಟ್ಟಣಗಳ ಮಾರಾಟ

ದಸರಾ ಕಾಲದಲ್ಲಿ 6 ಕೇಂದ್ರಗಳಲ್ಲಿ ಒಟ್ಟು 56845 ಆಹಾರ ಪೊಟ್ಟಣಗಳು ಮೈಸೂರು ನಗರದಲ್ಲಿ ಮಾರಲ್ಪಟ್ಟವೆಂದು ಇದರಿಂದ ಹೋಟೆಲುಗಳಲ್ಲಿ ಬೆಲೆ ಹೆಚ್ಚಲು ಆತಂಕ ಉಂಟಾಯಿತೆಂದು ಪ್ರಕಟವಾಗಿದೆ.

★

ಚುನಾವಣೆಗಳು

ನಂಜನಗೂಡು ತಾಲ್ಲೂಕು ಮಂಡಲಿಯ ಚುನಾವಣೆ ನವೆಂಬರ್ 22 ರಂದು, ಪೌರ ಸಭೆಯ ಚುನಾವಣೆ ಡಿಸೆಂಬರು 13ರಂದು ನಡೆಯುವುದು.

★

ಸೌಂದರ್ಯ ಸ್ಪರ್ಧೆಯಲ್ಲಿ ಗೆಲುವು

ಏಷ್ಯಾದಲ್ಲಿ ಪ್ರಪ್ರಥಮವಾಗಿ ನಡೆದ ಅಂತರರಾಷ್ಟ್ರೀಯ ಸೌಂದರ್ಯ ಸ್ಪರ್ಧೆಬ್ರೆಜಿಲಿನ ಪದಿನೆಂಟು ವರ್ಷದ ಮೇರಿಯಾ ಗೆಲುವು ಪಡೆದಳು.

ವೀರೇಂದ್ರರ ವಿಶಾಲ ಮನೋಭಾವ

ಜನವರಿಯಲ್ಲಿ ಸೇರುವ ಮುಂದಿನ ಶಾಸನ ಸಭಾ ಅಧಿವೇಶನಕ್ಕೆ ಮುನ್ನ ಮಂತ್ರಿಮಂಡಲ ವಿಸ್ತರಣೆ ಸಂಭವ ಇದೆ ಎಂದು ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರು ಬೆಂಗಳೂರಿನಲ್ಲಿ ನಿನ್ನೆ ಸೂಚಿಸಿದರು. ನಾಯಕ ಚುನಾವಣೆ ಕಾಲದಲ್ಲಿ ತಮಗೆ ಬೆಂಬಲನೀಡದಿದ್ದವರ ಪೈಕಿ ಒಬ್ಬಿಬ್ಬರನ್ನು ಮಂತ್ರಿಮಂಡಲಕ್ಕೆ ಸೇರಿಸಿಕೊಳ್ಳುವ ಇಚ್ಛೆ ತಮಗೆ ಇದೆಯೆಂದು ಮುಖ್ಯ ಮಂತ್ರಿಗಳು ತಿಳಿಸಿದರು.

ಮಂತ್ರಿಮಂಡಲದ ವಜಾಕ್ಕೆ ಕರೆ

ಕೇರಳದ ಶ್ರೀ ಇ.ಎಂ.ಎಸ್. ನಂಬೂದರಿಪಾದರ ಮಂತ್ರಿಮಂಡಲವು ಕೇಂದ್ರ ಸರ್ಕಾರದ ಆಜ್ಞೆಯನ್ನು ಉಲ್ಲಂಘನೆ ಮಾಡಿದ್ದಕ್ಕಾಗಿ ರಾಜ್ಯಾಂಗದ 356 ನೇ ವಿಧಿಯಂತೆ ರಾಜ್ಯ ಆಡಳಿತವನ್ನು ಕೇಂದ್ರ ವಹಿಸಿಕೊಳ್ಳಬೇಕೆಂದು ಕೇರಳ ಪ್ರದೇಶ ಕಾಂಗ್ರೆಸಿನ ಹಿರಿಯ ನಾಯಕರು ಕೇಂದ್ರವನ್ನು ಒತ್ತಾಯಮಾಡಿದರು. ಮಂತ್ರಿಮಂಡಲವನ್ನು ವಜಾ ಮಾಡುವುದು ಸಹ ಸೂಕ್ತವಾಗಿದೆ ಎಂದು ಇವರು ತಿಳಿಸಿದರು. ರಕ್ಷಣಾ ಮಂತ್ರಿಗಳಿಗೆ ಈ ವಿಚಾರದಲ್ಲಿ ಎಚ್ಚರಿಕೆ ಕೊಟ್ಟಿದೆ.

ವಿಷದಿಂದ ಕೂಡಿದ ನೀರು

ಬರೋಡಾ ಜಿಲ್ಲೆಯ ಪಠಾರಾ ತಾಲ್ಲೂಕಿನ ಮಹಿಸಾಗರ ನದಿಯ ನೀರು ಹದಿನೈದು ಮೈಲಿಗಳಷ್ಟು ಪ್ರದೇಶದಲ್ಲಿ ವಿಷಪೂರಿತವಾಗಿರುವುದು ಕಂಡುಬಂದಿದ್ದು ಆ ದನ್ನು ಸೇವಿಸದಿರುವಂತೆ ಎಚ್ಚರಿಸಲಾಗಿದೆ. ನದಿಯ ನೀರು ಬಣ್ಣ ಹಸಿರು ಆಗಿದ್ದು ಅದರಲ್ಲಿ ಸತ್ತ ಮೀನುಗಳು ತೇಲುತ್ತಿವೆ.

ಪೌರಸಭೆ ಅಧಿವೇಶನ

ಸೆಪ್ಟೆಂಬರ್ ಮಾಹೆಯ ಮೈಸೂರ್ ಪೌರಸಭೆಯ ಮುಂದುವರಿದ ಅಧಿವೇಶನ ಈ ತಿಂಗಳು 15 ನೇ ತಾ|| ಸಮಾವೇಶವಾಗುವುದು. ಮಧ್ಯಾಹ್ನ 4 ಘಂಟೆಗೆ.

ಹಿಂದೂಗಳ ಆಚಾರ

ಸಂಗ್ರಾಹಕರು— 'ಶಾಸ್ತ್ರಧರ್ಮನಿರತ" ಅನಂತನರಸಿಂಹಯ್ಯಂಗಾರ್

(ಮುಂದುವರಿದುದು)

ಯಾವ ಸಮಯದಲ್ಲಿ ದ್ವಿಜನಾದವನಿಗೆ ಗುರುವು ಯಜ್ಞೋಪವೀತ ಧಾರಣೆ ಮಾಡಿಸುತ್ತಾನೋ, ಆ ಸಮಯದಿಂದ ಅವನಿಗೆ ಎರಡನೇ ಜನ್ಮ ಪ್ರಾಪ್ತವಾದಂತೆ. ಅವನಿಗೆ ಆಚಾರ್ಯನೇ ತಂದೆ, ಗಾಯಿತ್ರಿಯೇ ತಾಯಿ.

ಬ್ರಾಹ್ಮವೇ ಮೊದಲಾದ ಮೊದಲ್ಗು ನಾಲ್ಕು ರೀತಿಯ ವಿವಾಹಮಾಡಿಕೊಂಡವರಿಗೆ ಬ್ರಹ್ಮವರ್ಚಸ್ಸಿನಿಂದ ಕೂಡಿದವರೂ, ಶಿಷ್ಟಸಮ್ಮತನಾದ ಕೆಲಸವನ್ನು ಮಾಡುವವರೂ, ರೂಪುವಂತರೂ, ಸ್ವಾತ್ವಿಕರೂ, ಧನವಂತರೂ, ಯಶಸ್ಸುಳ್ಳವರೂ, ಯಥೇಚ್ಛವಾದ ಭೋಗವನ್ನು ಅನುಭವಿಸುವವರೂ, ನೂರು ವರ್ಷ ಆಯಸ್ಸುಳ್ಳ ಮಕ್ಕಳೂ ಹುಟ್ಟುತ್ತಾರೆ. ಇತರ ರೀತಿಯ ದುರ್ವಿವಾಹವನ್ನು ಮಾಡಿಕೊಂಡವರಿಗೆ ಅಪ್ರಯೋಜಕರೂ, ಅಸತ್ಯವಾದಿಗಳೂ, ಬ್ರಾಹ್ಮಣಕರ್ಮ ಮಾಡುವುದಕ್ಕೆ ಜಿಹಾಸೆಪಡುವವರೂ ಆದ ಮಕ್ಕಳು ಜನಿಸುತ್ತಾರೆ.

ಹತ್ತು ವಯಸ್ಸಾದ ಕನ್ಯೆಯನ್ನು ದಾನಮಾಡುವವನು ಸ್ವರ್ಗಲೋಕವನ್ನು ಹೊಂದುತ್ತಾನೆ. ಒಂಭತ್ತು ವರ್ಷದ ಕನ್ಯೆಯನ್ನು ದಾನಮಾಡುವವನು ವೈಕುಂಠಲೋಕವನ್ನು ಹೊಂದುತ್ತಾನೆ. ಎಂಟು ವರ್ಷದ ಕನ್ಯೆಯನ್ನು ದಾನಮಾಡುವವನು ಬ್ರಹ್ಮಲೋಕವನ್ನು ಹೊಂದುತ್ತಾನೆ. ರಜಸ್ವಲೆಯಾದ ಕನ್ಯೆಯನ್ನು ದಾನ ಮಾಡುವವನು ರೌರವ ನರಕವನ್ನು ಹೊಂದುತ್ತಾನೆ.

○

ಸ್ಪೆಷಲ್ ಲೀವ್ ವಜಾ

ಬೊಂಬಾಯಿನ ಬ್ಲಿಟ್ಸ್ ಪತ್ರಿಕೆಯ ಸಂಪಾದಕ ಶ್ರೀ ಕರಂಜಿಯಾರಿಗೆ ಬೊಂಬಾಯಿ ಹೈಕೋರ್ಟು ಕೋರ್ಟು ಅವಮೇಳನ ಆಪಾದನೆಗಾಗಿ 15 ದಿನಗಳ ಸಜೆ ಮತ್ತು ರೂ: 200 ದಂಡ ವಿಧಿಸಿದ್ದರ ಮೇಲ್ಕೆ ಸುಪ್ರೀಂ ಕೋರ್ಟಿಗೆ ಅವರು ಹಾಕಿದ್ದ ಸ್ಪೆಷಲ್ ಲೀವ್ ವಜವಾಯಿತ್ತು. ಯಾವ ದೇಶದಲ್ಲೂ ನ್ಯಾಯಾಲಯದ ಟೀಕೆಗಾಗಿ ಸಂಪಾದಕರು ಜೇಲಿಗೆ ಕಳಿಸಲ್ಪಟ್ಟಿಲ್ಲವೆಂದು ಕರಂಜಿಯಾರ ವಕೀಲರು ವಾದಿಸಿದರು.

Protect the Cow



ಗೋರಕ್ಷಣೆ ಮಾಡಿ ಪ್ರಾಣಿದಯಾ ಕಾರ್ಯಗಳು ಹೆಚ್ಚಾಗಿ ನಡೆಯಲಿ

SHAKTI
SUDHA
A Superb Tonic

ಚುಡ್‌ಲಾಂಡ್ಸ್ ಜನಭ್ರಿತ 5ನೇ ವಾರ
ವೈಭವ ಆರಂಭ
— ಮನಮೋಹಕ ಹಿಂದಿ ಚಿತ್ರ —
ನೀಲ್ ಕಮಲ್ ★ Neel Kamal
ಈಸ್ಟ್‌ಮನ್ ಕಲರ್
.... ಮಿಲಿಯಗಟ್ಟಲೆ ಖರ್ಚಾಯಿನ ಅತ್ಯಾಕರ್ಷಣೀಯ ಹಿಂದಿ ಚಿತ್ರ ....
ತಾರಾಗಣ— ವಹಿದಾ ರಹಿಮಾ, ಮನೂಜ್‌ಕುಮಾರ್, ರಾಜ್‌ಕುಮಾರ್
ಬಾಳ್‌ರಾಜ್ ಸಹಾನಿ, ಲಲಿತಾ ಪವಾರ್, ಡೇವಿಡ್, ಶಶಿಕಲಾ, ಮಹಮೂದ್

ಅಪೆರ— ಜನಪ್ರಿಯ 6 ನೇ ವಾರ
ಚಿತ್ತಾಕರ್ಷ ಹಿಂದಿ ಚಿತ್ರ
ಬ್ರಹ್ಮಚಾರಿ
ಪ್ರತಿಯೊಬ್ಬರೂ ನೋಡಿ ಆನಂದಿಸತಕ್ಕ ಈಸ್ಟ್‌ಮೆನ್ ಕಲರ್‌ನ ಹಿಂದಿ ಚಿತ್ರ
ಶಮ್ಮಿ ಕಪೂರ್, ರಾಜಶ್ರೀ, ಮುಮ್ತಾಜ್, ಪ್ರಾಣ್, ಮಹಮೂದ್

Printing — Neat Binding
Lakshminarasimha Press
Sivarampet, Mysore

ಆಶೋಕ ಏಜೆನ್ಸೀಸ್
ಲಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು
ಎಲ್ಲ ವಿಧ ಆಯುರ್ವೇದ ಔಷಧಗಳಿಗಾಗಿ ದೊರೆಯುವ ಕಡೆ

Golden Jubilee of 'Satyavadi'

The golden jubilee of the 'Satyavadi' is to be celebrated very soon

The President, the Prime Minister, H.H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah, Sri Madhav Shenoi, Sri Opera Talkies, Padmabhushana Dr. M. C. Modi, Dr. R. S. Nanjunda Swamy (Glasgow) Sri Ananthanarasimha Iyengar (Honganur) have generously extended donations and best wishes.

It is welknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysoe 4